**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.**

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 1159/2023 .

ಫ್ರಾ.ಸಾ. : 2
ಚಾ.ಸಾ. : 2

| | |
|---|---|
| ಹೆಸರು | : ಗೌರಿ |
| ಗಂಡನ ಹೆಸರು | : ಸುಬ್ಬ |
| ವಯಸ್ಸು | : 57 ವರ್ಷ |
| ಉದ್ಯೋಗ | : ಕೂಲಿ |
| ವಿಳಾಸ | : ಬೆಸಗೂರು ಗ್ರಾಮ |

... ........................................................................................................ ...

ದಿನಾಂಕ 7 ನೇ ಜೂನ್ 2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ:- ಮಾನ್ಯ ಸ ಸ ಅ ರವರಿಂದ : -

ಆರೋಪಿ ನನ್ನ ಅಳಿಯ. ಚಾಸಾ 1 ನನ್ನ ಮಗಳು, ಅವರಿಗೆ ಇಬ್ಬರು ಮಕ್ಕಳು. ಸುಮಾರು 8-9 ವರ್ಷಗಳ ಹಿಂದೆ ನಾನು ಮನೆಯಲ್ಲಿ ಇರುವಾಗ, ನನ್ನ ಮಗಳು ತನ್ನ ಮಕ್ಕಳನ್ನು ಅಂಗನವಾಡಿಯಿಂದ ಕರೆದುಕೊಂಡು ಮನೆಯ ಮುಂಭಾಗದ ಗೇಟ್ ಬಳಿ ಬರುವಾಗ ಆರೋಪಿಯು ಏಕಾಏಕಿ ನನ್ನ ಮಗಳ ತಲೆಗೆ ಹಲ್ಲೆ ಮಾಡಿರುತ್ತಾನೆ. ಆಗ ನಾನು ತಡೆಯ ಹೋದಾಗ ಆರೋಪಿಯು ನನ್ನ ಎಡಗೈ ಮೊಣಕೈ ಭಾಗಕ್ಕೆ ಅದೆ ಕತ್ತಿಯಿಂದ ಹಲ್ಲೆ ಮಾಡಿ ತೀವ್ರ ಸ್ವರೂಪದ ಗಾಯಪಡಿಸಿರುತ್ತಾನೆ. ಆರೋಪಿಯು ತನ್ನ ಕತ್ತಿಯನ್ನು ತೆಗೆದುಕೊಂಡು ಸ್ಥಳದಿಂದ ಪರಾರಿಯಾದನು. ಆರೋಪಿಯನ್ನು ನೋಡಿ ಗುರುತಿಸುತ್ತಾರೆ. ಈಗ ನ್ಯಾಯಾಲಯದ ಮುಂದಿರುವ ಕತ್ತಿಯಿಂದಲೆ ಆರೋಪಿ ನನಗೆ ಹಲ್ಲೆ ಮಾಡಿರಬಹುದು.

**ಪಾಟೀ ಸವಾಲು :- ಆರೋಪಿ ಪರ ವಕೀಲರವರಿಂದ :-**

ನನ್ನ ಮಗಳನ್ನು ಮದುವೆ ಆದ ನಂತರ 3 ವರ್ಷ ಗಂಡನ ಮನೆಯಲ್ಲಿದ್ದಳು. ಆನಂತರ ನಮ್ಮ ಮನೆಯಲ್ಲಿ ವಾಸವಿದ್ದಳು. ನನ್ನ ಅಳಿಯ ನಮ್ಮ ಮನೆಗೆ ಬಂದಿದ್ದು ನನಗೆ ಇಷ್ಟಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಅಳಿಯ ಕೆಲಸಕ್ಕೆ ಹೋಗುತ್ತಿದ್ದರು, ಹಣ ಸಹ ನೀಡುತ್ತಿದ್ದರು. ಆರೋಪಿ ಇಸ್ಪೀಟು ಆಡುತ್ತದರು ಆ ಕಾರಣಕ್ಕಾಗಿ ಜಗಳ ಆಗುತ್ತಿತ್ತು. ಗಲಾಟೆ ಆದಾಗ ನಾನು ನನ್ನ ಮಗಳು ಇಬ್ಬರು ಇದ್ದೆವು.

ಗಲಾಟೆ ಬಿಡಿಸಲು ನಾನು ಬಂದೆ ಆಗ ನನಗೆ ಏಟಾಯಿತು. ನಾನು ಮತ್ತು ನನ್ನ ಮಗಳು ನನ್ನ ಅಳಿಯನ ಜೊತೆ ಕೇವಲವಾಗಿ ಮಾತನಾಡುತ್ತಿದ್ದೆವು, ಯಾವುದೇ ಗೌರವ ಕೊಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಆಗಾಗ ಅಳಿಯನ ಜೊತೆ ಗಲಾಟೆ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಆ ದಿನವೂ ಸಹ ನಾನು ಗಲಾಟೆ ಪ್ರಾರಂಭಿಸಿದೆ ಎಂದರೆ ಸರಿಯಲ್ಲ. ಯಾವ ವಿಚಾರಕ್ಕೆ ಗಲಾಟೆ ಆಯಿತು ಎಂದು ನನಗೆ ಗೊತ್ತಿಲ್ಲ. ಗಲಾಟೆ ಅಯಿತು ಎಂದು ಹೇಳುವ 2 ದಿನದ ಹಿಂದೆಯೇ ಆರೋಪಿ ಮುರ್ನಾಡುವಿಗೆ ಹೋಗಿದ್ದರು ಎಂದರೆ ಸರಿಯಲ್ಲ. ನಾನು ಕಾಫಿ ತೋಟದಲ್ಲಿ ಗಾಯ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಗಲಾಟೆ ಯಾದ ದಿನ ನನಗೆ ನೆನಪಿಲ್ಲ. ಗಲಾಟೆ ಆದ ದಿನವೇ ಸಂಜೆ 4 ಗಂಟೆಗೆ ಆಸ್ಪತ್ರೆಗೆ ಹೋದವು. ಆರೋಪಿ ನನಗೆ ಕತ್ತಿಯಿಂದ ಕಡೆದಿಲ್ಲ ಎಂದರೆ ಸರಿಯಲ್ಲ. ಊರಿನ ಜನರೆಲ್ಲ ಗಲಾಟೆ ನೋಡಿದರು ಯಾರು ಬಿಡಿಸಲಿಲ್ಲ, ಅಷ್ಟರಲ್ಲಿ ಆರೋಪಿ ಓಡಿ ಹೋಗಿರುತ್ತಾನೆ. ಆರೋಪಿ ಮುರ್ನಾಡುವಿಗೆ ಹೋದ ಎಂದು ಸುಳ್ಳು ದೂರು ನೀಡಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ** :- - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತುಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿರುತ್ತದೆ)

ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sd/xxx-

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.

(ಸಾಕ್ಷಿಯವರ ಸಹಿ)